ವೆಂಕಮ್ಮ ಯೋಚಿಸಿದರು. ಮನೆಯಲ್ಲಿದ್ದುದು ಒಂದೇ ಒಂದು ಜರಿಸೀರೆ. ಒಂದೋ ತಾನು ಮದುವೆಗೆ ಹೋಗಬೇಕು ಅಥವಾ ಸೊಸೆಯನ್ನು ಕಳಿಸಬೇಕು. ತನ್ನ ಆಸೆಯನ್ನು ಅದುಮಿ ಹಿಡಿದುಕೊಂಡು ವೆಂಕಮ್ಮ ಸೊಸೆಯನ್ನು ಕರೆದು ಹೇಳಿದರು 'ಹೆಣೆ, ಎಂತ, ಮದ್ವಿಗೆ ನೀನು ಹ್ಯಾತ್ಯಾ ನಾನು ಹ್ವಾಪ್ದಾ?' ಎಂದಾಗ ಆ ಸೊಸೆ 'ನೀವೇ ಹೋಯ್ನಿ ಅಕಾ' ಎಂದು ಹೇಳಿದಾಗ ಅವರಿಗೆ ಆದ ಖುಷಿ ಅಷ್ಟಿಷ್ಟಲ್ಲ.

ಅಪರೂಪಕ್ಕೆ ಜರಿ ಸೀರೆ ಉಟ್ಟು ಶೃಂಗಾರ ಮಾಡಿಕೊಂಡು ಮದುವೆಗೆ ಹೊರಟು ನಿಂತ ವೆಂಕಮ್ಮ ಸೊಸೆಯನ್ನು ಕರೆದು, 'ಹಂಗಾರೆ ನಾನ್ ಹೋಯಿ ಬತ್ತೆ. ಮನೆಯ ಕಡೆ ಸ್ವಲ್ಪ ಜಾಗ್ರತೆ' ಎಂದು ಹೇಳುತ್ತಾ ಸೆರಗನ್ನು ಸರಿಮಾಡಿಕೊಳ್ಳುತ್ತಾ ಚಾವಡಿಗೆ ಬಂದರು. ಅಚಾನಕ್ಕಾಗಿ ಅವರ ಕಣ್ಣು ಗೋಡೆಯ ಮೇಲಿದ್ದ ಅವರ ಗಂಡನ ಭಾವಚಿತ್ರದ ಮೇಲೆ ಹೋಯಿತು.

ವೆಂಕಮ್ಮ ಕ್ಷಣ ಹೊತ್ತು ತನ್ನ ಗಂಡನ ಭಾವಚಿತ್ರವನ್ನೇ ತದೇಕದೃಷ್ಟಿಯಿಂದ ನೋಡಿದರು. ಅರಿವಿಲ್ಲದಂತೆಯೇ ಅವರ ಬಾಯಿಯಿಂದ ಮಾತು ಹೊರಟಿತು. 'ಅದೆಂತಕೆ ಹಾಂಗ್ ನೀವು ನನ್ನನ್ ಕಾಂಬುದೆ? ಛೀ ಹಾಂಗ್ ಕಾಣ್ಬೇಡಿ. ನಾನ್ ಇಷ್ಟ್ ಬೇಗ ಬತ್ತಿಲ್ಯೆ. ನನ್ ಜಂಬ್ರ ಇನ್ನೂ ಮುಗೀಲಿಲ್ಲೆ. ಸ್ವಲ್ಪ ದಿನ ಇಲ್ಲೇ ಇರ್ತೆ ಅಕ್ಕಾ? ನಾನ್ ಇನ್ನೂ ಇಲ್ಲೇ ಅನುಭವಿಸುದ್ ಇತ್ತೆ' ಎಂದು ಹೇಳಿ ನಾಚಿಕೆಯಿಂದ ಮುಖವನ್ನು ಸೀರೆಯ ಸೆರಗಿನಿಂದ ಮುಚ್ಚಿಕೊಂಡರು. ಹಾಗೆಯೇ, ಅಂಗಳಕ್ಕಿಳಿದು ಮದುವೆಯ ಮನೆಯ ದಾರಿ ಹಿಡಿದರು.

ಮುಂಡ್ಕೋಡು ಸೀತಾರಾಮ ಅಡಿಗರ ಮನೆಯಲ್ಲಿ ಮದುವೆ. ಮದುವೆಯ ಮನೆಯೂ ಅಂತಹ ದೂರವೇನೂ ಇರಲಿಲ್ಲ. ಮೂರು ಮೈಲು ಹಾಡಿಯಲ್ಲಿ ನಡೆದು ಹೋಗಿ, ಕಟ್ಟೆಮಕ್ಕಿಯ ಗುಡ್ಡೆಯನ್ನು ಹತ್ತಿ ಇಳಿದು ನಂತರ ಸಣ್ಣ ಹಾಡಿಯನ್ನು ಹಾದು ಹಾಲಾಡಿಹೊಳೆಯನ್ನು ದಾಟಿದರೆ ಅದರ ಆಚೆಯ ಮಗ್ಗುಲಲ್ಲೇ ಸೀತಾರಾಮಯ್ಯನ ಮನೆ. ಅವನ ಮಗನ ಮಗಳಿಗೇ ಮದುವೆ. ಸೀತಾರಾಮಯ್ಯ ಅಂದರೆ ಅನಂತಯ್ಯನವರ ತಂಗಿಯ ಗಂಡ. ಮೊದಲು ಯಾವುದೋ ಮನೆಯ ಪೌರೋಹಿತ್ಯದ ವಿಷಯದಲ್ಲಿ ಅನಂತಯ್ಯನವರಿಗೂ ಸೀತಾರಾಮಯ್ಯನಿಗೂ ಜಗಳವಾಗಿದ್ದು ಅವರ ಮತ್ತು ಇವರ ಮನೆಗೆ ಹೊಕ್ಕು ಬರುವ ಬಳಕೆ ನಿಂತು ಹೋಗಿತ್ತು. ಅಂತೂ ಇಷ್ಟು ಸಮಯದ ನಂತರ ಅದನ್ನೆಲ್ಲ ಮರೆತು ಸೀತಾರಾಮಯ್ಯನೇ ಮನೆಯವರೆಗೂ ಸ್ವತಃ ಬಂದು, ಮಾಡಿದ ಉಪಚಾರವನ್ನು ಸ್ವೀಕರಿಸಿ, 'ಮದುವೆಗೆ ಬರಬೇಕು' ಎಂದು ಹೇಳಿಕೆ ಕೊಟ್ಟು ಹೋಗಿದ್ದ. ಈ ಮದುವೆಯ ನೆಪದಿಂದಲಾದರೂ ಮತ್ತೆ ಅವರನ್ನೆಲ್ಲ ಕಾಣುವ ಅವಕಾಶವಾಯಿತಲ್ಲ ಎಂದು ವೆಂಕಮ್ಮನಿಗೆ ಸಂತೋಷವಾಗಿತ್ತು.

ಮದುವೆಯೂ ಯಾರ್ಯಾರದ್ದೋ ಅಲ್ಲ. ತನ್ನ ಯಜಮಾನರ ತಂಗಿಯ ಗಂಡ ಅಂದರೆ ಭಾವನ ಮಗನ ಮಗಳಿಗೆ ಮದುವೆ. ತನಗೆ ಕರೆಬಂದಾಗ ತಾನು ಅಜ್ಜಿಯ ಸ್ಥಾನದಲ್ಲಿ ನಿಂತು ಎಲ್ಲರನ್ನೂ ಒಮ್ಮೆ ನೋಡಿ ಮಾತಾಡಿಸಬೇಕು, ಬಂದ ಬಂಧು–ಬಾಂಧವರಲ್ಲಿ ಕಷ್ಟಸುಖಗಳನ್ನು ಹಂಚಿಕೊಳ್ಳಬೇಕು ಎನ್ನಿಸಿ ವೆಂಕಮ್ಮ ಖುಷಿಯಾಗಿದ್ದರು. ತನ್ನ ಸೊಸೆಯ ಮನಸ್ಸು ಹೇಗೋ? ಅವಳಿಗೆ ಮದುವೆಗೆ ಹೋಗಲು ಆಸೆ ಇತ್ತೋ ಏನೋ ಎಂದು ತಿಳಿಯಲು, ಅವಳನ್ನು ಹತ್ತಿರ ಕರೆದು 'ಹೆಣೆ, ನೀನೇ ಮದ್ವೆಗೆ ಹೋಪ್ದಾದ್ರೆ ಹೋಯಿ ಬಾ' ಎಂದು ಹೇಳಿದ್ದು, ಅವಳು ತನಗೇ ಆ ಪಟ್ಟ ಕಟ್ಟಿಬಿಟ್ಟಳಲ್ಲ. 'ನೀವೇ ಹೋಗಿ ಬನ್ನಿ, ಅತ್ತೆ' ಎಂದಳಲ್ಲ. ಭಾರಿ ಖುಷಿಯಾಯಿತು. ಎಂತಾ ಒಳ್ಳೆಯ ಸೊಸೆ. ಪಾಪದ ಹೆಣ್ಣು. ಒಂದು ಮಾತಾಡದೇ ನನ್ನನ್ನು ಅನುಸರಿಸಿಕೊಂಡು